# ಬರಲಿದೆ ಸ್ಕ್ರೀನ್‌ಶಾಟ್ ಬ್ಲಾಕ್

**ದೇಶದೆಲ್ಲೆಡೆ ಸಿಕ್ಕಾಪಟ್ಟೆ ಖ್ಯಾತಿ ಗಳಿಸಿದ್ದ ಈ ಟಿಕ್ ಟಾಕ್ ಆ್ಯಪ್‌ನಲ್ಲಿ ಅಶ್ಲೀಲತೆ ರಾರಾಜಿಸುತ್ತಿದೆ ಎಂಬ ಆರೋಪದಿಂದಾಗಿ, ಹೊಸದಾಗಿ ಈ ಆ್ಯಪ್ ಡೌನ್‌ಲೋಡ್ ಮಾಡಲು ನಿಷೇಧ ಹೇರಲಾಗಿದೆ. ಆದರೆ ಈಗಾಗಲೇ ಡೌನ್‌ಲೋಡ್ ಮಾಡಿಕೊಂಡ ಬಳಕೆದಾರರ ಮೊಬೈಲ್‌ಗಳಲ್ಲಿ ಈ ಆ್ಯಪ್ ಎಂದಿನಂತೆ ಕಾರ್ಯ ನಿರ್ವಹಿಸುತ್ತಿದೆ.**

**■ ಶಶಿ**

ಪ್ರಿಯಕರನಿಗೆ ಹುಡುಗಿಯೊಬ್ಬಳು ತನ್ನ ಆಪ್ತ ವಿಚಾರಗಳ ಬಗ್ಗೆ ವಾಟ್ಸ್‌ಆ್ಯಪ್ ಮೂಲಕ ಚಾಟ್ ಹಾಗೂ ಫೋಟೊಗಳನ್ನು ಕಳುಹಿಸಿದ್ದಳು. ಹಾಗೇ ಹಂಚಿಕೊಂಡಿದ್ದ ವಾಟ್ಸ್‌ಆ್ಯಪ್ ಸಂದೇಶಗಳು ಫೋಟೊಗಳ ಸಮೇತ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದವು!

ಅದು ಆ ಹುಡುಗಿಯ ಗಮನಕ್ಕೆ ಬರುವಷ್ಟರಲ್ಲಿ ಕಾಲ ಮಿಂಚಿಹೋಗಿತ್ತು. ಪ್ರಿಯಕರನನ್ನು ವಿಚಾರಿಸಿದರೆ, 'ನಾನು ಯಾರಿಗೂ ಅವುಗಳನ್ನು ಕಳುಹಿಸಿಲ್ಲ' ಎಂದು ಗಾಬರಿಗೊಂಡಿದ್ದ. ಅದು ಸತ್ಯವೂ ಆಗಿತ್ತು. ಅದರಿಂದ ದಿಗ್ಭ್ರಾಂತಿಗೊಂಡ ಆಕೆ ತಡಮಾಡದೆ ಸೈಬರ್ ಕ್ರೈಂ ಪೊಲೀಸರಿಗೆ ದೂರು ಕೊಟ್ಟು ಆ ಫೋಟೊಗಳು ಹಾಗೂ ವಾಟ್ಸ್‌ಆ್ಯಪ್ ಸಂದೇಶಗಳನ್ನು ಅಳಿಸಿ ಹಾಕಲು ಮನವಿ ಮಾಡಿದ್ದಳು.

ಪ್ರಕರಣ ದಾಖಲಿಸಿಕೊಂಡ ಸೈಬರ್ ಪೊಲೀಸರು ತನಿಖೆ ನಡೆಸಿದಾಗ 'ಆ ಹುಡುಗಿ ತನ್ನ ಪ್ರಿಯಕರನಿಗೆ ಕಳುಹಿಸಿದ್ದ ಮೆಸೇಜ್‌ಗಳನ್ನು ಆತನ ಮತ್ತೊಬ್ಬ ಸ್ನೇಹಿತ ನೋಡಿದ್ದ. ಹಾಗೆಯೇ ಅವುಗಳನ್ನು ಸ್ಕ್ರೀನ್ ಶಾಟ್ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ವಿಕೃತಿ ಮೆರೆದಿದ್ದ' ಎಂಬುದು ಗೊತ್ತಾಯಿತು. ಅಲ್ಲಿಗೆ ಆ ಪ್ರಕರಣ ಸುಖಾಂತ್ಯವಾಗಿದ್ದರೂ ಆ ಹುಡುಗಿಯ ಖಾಸಗಿತನಕ್ಕೆ ಧಕ್ಕೆಯಾಗಿದ್ದಂತೂ ಸುಳ್ಳಲ್ಲ.

### ಇಲ್ಲಿ ತಪ್ಪು ಯಾರದ್ದು?

ತನ್ನ ಪ್ರೇಯಸಿಯೊಂದಿಗೆ ಹಂಚಿಕೊಂಡಿದ್ದ ಖಾಸಗಿ ವಿಚಾರಗಳನ್ನು ಹಂಚಿಕೊಂಡಿದ್ದು ಆ ಹುಡುಗಿಯ ತಪ್ಪೇ? ಅಥವಾ ಹಾಗೆ ಹಂಚಿಕೊಂಡ ಮಾಹಿತಿಯನ್ನು ಮತ್ತೊಬ್ಬರಿಗೆ ಸುಲಭವಾಗಿ ಸಿಗುವಂತೆ ಮಾಡಿದ್ದ ಪ್ರಿಯಕರನ ತಪ್ಪೇ?. ಇವೆರಡರ ಬದಲು ವಾಟ್ಸ್‌ಆ್ಯಪ್ ಮಾಹಿತಿಯನ್ನು ಸ್ಕ್ರೀನ್‌ಶಾಟ್ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟ ವಾಟ್ಸ್‌ಆ್ಯಪ್ ಕಂಪನಿಯದ್ದು ತಪ್ಪಾ?

ಇದೇ ರೀತಿಯ ಹಲವು ಪ್ರಕರಣಗಳು ನಡೆದ ಬಳಿಕ ಕಡೆಗೂ ಎಚ್ಚೆತ್ತುಕೊಂಡ ವಾಟ್ಸ್‌ಆ್ಯಪ್ ಕಂಪನಿಯು ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಲು ಮುಂದಾಗಿದೆ. ತನ್ನ ಬಳಕೆದಾರರ ಖಾಸಗಿತನ ಹಾಗೂ ಭದ್ರತೆಯ ದೃಷ್ಟಿಯಿಂದ ಕಂಪನಿಯು ಹೊಸ ಫೀಚರ್ ಒಂದನ್ನು ವಾಟ್ಸ್‌ಆ್ಯಪ್‌ಗೆ ಸೇರಿಸಲು ಮುಂದಾಗಿದೆ.

ಬಳಕೆದಾರರ ಖಾಸಗಿತನದ ಭದ್ರತೆಗಾಗಿ ಬ್ಲಾಕ್ ಸ್ಕ್ರೀನ್ ಶಾಟ್ ಆಯ್ಕೆಯೊಂದನ್ನು ಬಿಡುಗಡೆ ಮಾಡಲಿದ್ದು, ಅದರಿಂದ ಗ್ರಾಹಕರ ಸಂಪೂರ್ಣ ಖಾಸಗಿತನಕ್ಕೆ ಧಕ್ಕೆಯಾಗದಂತೆ ತಡೆಯಲು ಸಾಧ್ಯವಾಗದಿದ್ದರೂ ಅಲ್ಪಪ್ರಮಾಣದಲ್ಲಾದರೂ ಕಡಿವಾಣ ಹಾಕಬಹುದು.

ಬಳಕೆದಾರರ ಖಾಸಗಿತನದ ಭದ್ರತೆಗಾಗಿ ಬ್ಲಾಕ್ ಸ್ಕ್ರೀನ್ ಶಾಟ್ (Block ScreenShot) ಆಯ್ಕೆಯೊಂದನ್ನು ಕಂಪನಿ ತನ್ನ ವರ್ಷನ್‌ನಲ್ಲಿ ಒದಗಿಸಲಿದೆ. ಬಳಕೆದಾರರು ಈ ಫೀಚರ್ ಅನ್ನು ಆನ್ ಮಾಡಿಟ್ಟ ಬಳಿಕ ಯಾರಿಗಾದರೂ ಸಂದೇಶ ಕಳುಹಿಸಿದರೆ ಅವುಗಳನ್ನು ಸ್ಕ್ರೀನ್‌ಶಾಟ್ ತೆಗೆಯಲು ಸಾಧ್ಯವಾಗುವುದಿಲ್ಲ. ■

## ಟಿಕ್ ಟಾಕ್ ನಿಷೇಧವಾದರೇನಂತೆ..!

ಟಿಕ್ ಟಾಕ್... ಎಷ್ಟರಮಟ್ಟಿಗೆ ಜನಜನಿತವಾಗಿತ್ತೆಂದರೆ ಕುಂತರೂ ನಿಂತರೂ ಅದರದ್ದೇ ಜ್ಞಾನ. ಕೆಲವರಿಗಂತೂ ಬೈಕ್ ಓಡಿಸುವಾಗ, ಊಟ ಮಾಡುವಾಗ, ಆಟವಾಡುವಾಗ, ಸ್ನೇಹಿತರನ್ನು ಭೇಟಿಸಲು, ಪ್ರೀತಿ ನಿವೇದನೆಗೆ, ಬ್ರೇಕ್ ಅಪ್ ಹೇಳಲು ಹೀಗೆ ಬಹುತೇಕ ಎಲ್ಲ ಸಂದರ್ಭಗಳಲ್ಲಿಯೂ ಇದು ಇದ್ದೇ ಇರುತ್ತಿತ್ತು. ಈ ಆ್ಯಪ್‌ನಲ್ಲಿ ಮಗ್ನರಾಗಿ ಪ್ರಾಣ ಕಳೆದುಕೊಂಡ ಘಟನೆಗಳೂ ನಡೆದಿವೆ.

ಸಿಕ್ಕಾಪಟ್ಟೆ ಖ್ಯಾತಿ ಗಳಿಸಿದ್ದ ಈ ಟಿಕ್ ಟಾಕ್ ಆ್ಯಪ್‌ನಲ್ಲಿ ಅಶ್ಲೀಲತೆ ರಾರಾಜಿಸುತ್ತಿದೆ ಎಂಬ ಆರೋಪದಿಂದಾಗಿ, ಹೊಸದಾಗಿ ಈ ಆ್ಯಪ್ ಡೌನ್‌ಲೋಡ್ ಮಾಡಲು ನಿಷೇಧ ಹೇರಲಾಗಿದೆ. ಆದರೆ ಈಗಾಗಲೇ ಡೌನ್‌ಲೋಡ್ ಮಾಡಿಕೊಂಡ ಬಳಕೆದಾರರ ಮೊಬೈಲ್‌ಗಳಲ್ಲಿ ಈ ಆ್ಯಪ್ ಎಂದಿನಂತೆ ಕಾರ್ಯ ನಿರ್ವಹಿಸುತ್ತಿದೆ. ಈಗ ಚರ್ಚೆಗೆ ಗ್ರಾಸವಾಗಿರುವುದು ಟಿಕ್ ಟಾಕ್ ಮಾದರಿಯ ಹಲವು ಆ್ಯಪ್‌ಗಳು. ಟಿಕ್ ಟಾಕ್‌ನಂತೆಯೇ ಕಾರ್ಯ ನಿರ್ವಹಿಸುವ ಹಲವಾರು ಆ್ಯಪ್‌ಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯ. ಟಿಕ್ ಟಾಕ್ ನಿಷೇಧದ ಬಳಿಕ ಆ ಆ್ಯಪ್ ಇಲ್ಲದಿದ್ದರೇನಂತೆ ಸಾಕಷ್ಟು ಮಂದಿ ಅದೇ ಮಾದರಿಯ ಪರ್ಯಾಯ ಆ್ಯಪ್‌ಗಳತ್ತ ಮುಖಮಾಡಿದ್ದಾರೆ.

### ಯಾವುವು ಆ ಆ್ಯಪ್‌ಗಳು?

ವಿಗೊ ವಿಡಿಯೊ, ಲೈಕ್ ವಿಡಿಯೊ, ಟೊಗೆಟ್ ಯು, ಕ್ವೈ (Kwai), ಫ್ಯೂನಿಮೇಟ್, ಟ್ರಿಲ್ಲರ್, ಲೊಮೊಟಿಫ್, ಚೀಜ್, ಫೈರ್‌ವರ್ಕ್. ಈ ಎಲ್ಲ ಆ್ಯಪ್‌ಗಳು ಟಿಕ್ ಟ್ಯಾಕ್‌ಗೆ ಸರಿಸಮಾನಾಗಿ ಕಾರ್ಯ ನಿರ್ವಹಿಸುತ್ತವೆ. ಟಿಕ್ ಟಾಕ್ ನಿಷೇಧದ ಬಳಿಕ ಕೋಟ್ಯಂತರ ಮಂದಿ ಈ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಉಪಯೋಗಿಸುತ್ತಿದ್ದಾರೆ. ಇನ್ನೂ ಕೆಲವರು ಗೂಗಲ್‌ನಲ್ಲಿ ಟಿಕ್ ಟಾಕ್‌ಗೆ ಹುಡುಕಾಟ ನಡೆಸುತ್ತಿದ್ದಾರೆ. ■